ಉದಯವಾಣಿ
ಕನ್ನಡ ದಿನಪತ್ರಿಕೆ

# ಅಂತರ್ ವಿವಿ ಈಜು: ಪೂರ್ವ, ಮೀನಾಕ್ಷಿಗೆ ಸ್ವರ್ಣ

**ಬೆಂಗಳೂರು:** ಜೈನ್ ವಿವಿಯಲ್ಲಿ ನಡೆಯುತ್ತಿರುವ ಅಂತರ್ ವಿವಿ ಈಜು ಚಾಂಪಿಯನ್‌ಶಿಪ್‌ನ ಎರಡನೇ ದಿನ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಆತಿಥೇಯ ಜೈನ್ ವಿವಿಯ ಪೂರ್ವ ಕಿರಣ್ ಶೇಟ್ಯೆ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. 36.41.1 ಸೆಕೆಂಡ್‌ಗಳಲ್ಲಿ ಅವರು ಗುರಿ ತಲುಪಿದರು. 200 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಜೈನ್ ವಿ.ವಿ ನ ಮೀನಾಕ್ಷಿ 2.15.09 ಸೆಕೆಂಡ್‌ನಲ್ಲಿ ಗುರಿ ಮುಟ್ಟಿ ಅವರು ಚಿನ್ನದ ಪದಕ ಗೆದ್ದರು. 400 ಮೀ. ಮೆಡ್ಲೆನಲ್ಲೂ ಮೀನಾಕ್ಷಿ (5:21.13 ಸೆ) ಚಿನ್ನದ ಪದಕ ಗೆದ್ದಿದ್ದಾರೆ. ಇದೇ ವಿಭಾಗದಲ್ಲಿ ಪೂರ್ವ ಕಿರಣ್ ಶೇಟ್ಯೇ (5:41.35 ಸೆ) ಬೆಳ್ಳಿ ಪದಕ ಗೆದ್ದರು.